# ಶ್ರೀ ಬಸವೇಶ್ವರ ಕೋ-ಆಪರೇಟೀವ್ವ ಬ್ಯಾಂಕ ಲಿಮಿಟೆಡ್ ಬಸವನಬಾಗೇವಾಡಿ

ಕೇಂದ್ರ ಕಚೇರಿ: ಬಸವನ ಬಾಗೇವಾಡಿ-586203 ಜಿಲ್ಲೆ:ವಿಜಯಪುರ ದೂರವಾಣಿ:08358-245228

ಸಂಖ್ಯೆ: ಆಡಳಿತ/ಸಿಬ್ಬಂದಿ ನೇಮಕಾತಿ/05/2023-24 ದಿನಾಂಕ: 14-09-2023

## ಸಿಬ್ಬಂದಿ ನೇಮಕಾತಿ ಪ್ರಕಟಣೆ

ಶ್ರೀ ಬಸವೇಶ್ವರ ಕೋ-ಆಪರೇಟೀವ್ವ ಬ್ಯಾಂಕ ಲಿ., ಬಸವನ ಬಾಗೇವಾಡಿ ಇದರಲ್ಲಿ ಖಾಲಿ ಇರುವ ಈ ಕೆಳಗೆ ನಮೂದಿಸಿದ 08 ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಬ್ಯಾಂಕಿನಿಂದ ಪಡೆದ ಅರ್ಜಿಯನ್ನು ಅಭ್ಯರ್ಥಿಗಳು ಬ್ಯಾಂಕು ನಿಗದಿಪಡಿಸಿದ ಅರ್ಜಿ ನಮೂನೆಗಳಲ್ಲಿಯೇ ಅರ್ಜಿಗಳನ್ನು ಸಲ್ಲಿಸಬೇಕು.

| ಕ್ರ ಸಂ | ಹುದ್ದೆಯ ಹೆಸರು | ಹುದ್ದೆಯ ಸಂಖ್ಯೆ | ವೇತನಶ್ರೇಣಿ |
|---|---|---|---|
| 1 | ಕಿರಿಯ ಸಹಾಯಕ/ಕಂಪ್ಯೂಟರ ಪ್ರೋಗ್ರಾಮರ | 03 | 27650-52650 |
| 2 | ಸಿಪಾಯಿ/ಕಾವಲುಗಾರ | 05 | 19950-37900 |

**ಬ್ಯಾಂಕಿನ ಸೇವಾನಿಯಮಗಳ ಪ್ರಕಾರ ಮೂಲವೇತನ/ತುಟ್ಟಿಭತ್ಯೆ ಹಾಗೂ ಇತರ ಭತ್ತೆಗಳನ್ನು ನೀಡಲಾಗುವದು.**

### 1) ವಿದ್ಯಾರ್ಹತೆ:

**ಕಿರಿಯ ಸಹಾಯಕರು/ಕಂಪ್ಯೂಟರ ಪ್ರೋಗ್ರಾಮರ:** ಅಧೀಕೃತವಾಗಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಬಿ.ಕಾಂ/ಎಂ.ಕಾಂ/ಬಿ.ಸಿ.ಎ/ಎಂ.ಸಿ.ಎ/ಪದವಿಯಲ್ಲಿ ತೇರ್ಗಡೆಯಾಗಿರಬೇಕು. ಹಾಗೂ ಕಂಪ್ಯೂಟರ ಕಾರ್ಯನಿರ್ವಹಣೆ ಜ್ಞಾನವನ್ನು ಕಡ್ಡಾಯವಾಗಿ ಹೊಂದಿರಬೇಕು ಈ ಕುರಿತು ಪ್ರಮಾಣ ಪತ್ರವನ್ನು ಲಗತ್ತಿಸಬೇಕು. ಕನ್ನಡ, ಆಂಗ್ಲ ಭಾಷೆ ಪರಿಜ್ಞಾನ ಹೊಂದಿರಬೇಕು.

**ಸಿಪಾಯಿ/ಕಾವಲುಗಾರ :** ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಕನ್ನಡ ಓದಲು ಹಾಗೂ ಬರೆಯಲು ಬರಬೇಕು.

**2) ವಯೋಮಿತಿ:** ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳಾಗಿರಬೇಕು ಮತ್ತು ಕರ್ನಾಟಕ ರಾಜ್ಯ ಸರಕಾರದ ರೀತ್ಯಾ ಈ ಕೆಳಕಂಡ ಗರಿಷ್ಠ ವಯೋಮಿತಿಗೊಳಪಟ್ಟಿರಬೇಕು:

| | | |
|---|---|---|
| ಅ | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ | 40 ವರ್ಷಗಳು |
| ಬ | ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ | 38 ವರ್ಷಗಳು |
| ಕ | ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ | 35 ವರ್ಷಗಳು |

### 3) ಅರ್ಜಿ ಶುಲ್ಕ:

1. ಕಿರಿಯ ಸಹಾಯಕ/ಕಂಪ್ಯೂಟರ ಪ್ರೋಗ್ರಾಮರ ಹುದ್ದೆಗೆ ಅರ್ಜಿ ಸಲ್ಲಿಸುವ ಸಾಮಾನ್ಯ ಮತ್ತು ಇತರೆ ಹಿಂದುಳಿದ ಅಭ್ಯರ್ಥಿಗಳು ರೂ. 1000/- ಹಾಗೂ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳು ರೂ. 500/- ಡಿ.ಡಿ.ಯನ್ನು ಹಾಗೂ ಸಿಪಾಯಿ/ಕಾವಲುಗಾರ ಹುದ್ದೆಗೆ ಅರ್ಜಿ ಸಲ್ಲಿಸುವ ಸಾಮಾನ್ಯ ಮತ್ತು ಇತರೆ ಹಿಂದುಳಿದ ಅಭ್ಯರ್ಥಿಗಳು ರೂ. 500/- ಹಾಗೂ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳು ರೂ. 250/- ಡಿ.ಡಿ.ಯನು **ಶ್ರೀ ಬಸವೇಶ್ವರ ಕೋ-ಆಪರೇಟೀವ್ವ ಬ್ಯಾಂಕ ಲಿಮಿಟೆಡ್ ಬಸವನ ಬಾಗೇವಾಡಿ** ಹೆಸರಿನಿಂದ ಪಡೆದು ಅರ್ಜಿ ಜೊತೆಗೆ ಲಗತ್ತಿಸಬೇಕು. ಅಥವಾ ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ನಗದು ಪಾವತಿಸಿ ನಕಲು ಪ್ರತಿಯನ್ನು ಅರ್ಜಿಗೆ ಲಗತ್ತಿಸಬೇಕು. ಈ ಹಣವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ.

### 4) ಅರ್ಜಿ ಸಲ್ಲಿಸುವ ವಿಧಾನ:

1) ಬ್ಯಾಂಕು ನಿಗದಿಪಡಿಸಿದ ಅರ್ಜಿಗಳಲ್ಲಿ ಮಾತ್ರ ಅರ್ಜಿಯನ್ನು ಸಲ್ಲಿಸತಕ್ಕದ್ದು. ನಿಗದಿತ ಅರ್ಜಿಗಳನ್ನು ರೂ 100/- ಶುಲ್ಕವನ್ನು ಭರಣಾ ಮಾಡಿ ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 4.30 ಘಂಟೆಯವರೆಗೆ (ರವಿವಾರ ಮತ್ತು ರಜೆ ದಿನಗಳನ್ನು ಹೊರತುಪಡಿಸಿ) ಪಡೆಯಬಹುದು.
2) ಒಬ್ಬ ಅಭ್ಯರ್ಥಿಯು ಒಂದೇ ಹುದ್ದೆಗೆ ಮಾತ್ರ ಅರ್ಜಿ ಸಲ್ಲಿಸುವದು. ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗುತ್ತದೆ ಎಂಬುದನ್ನು ಲಕೋಟೆಯ ಮೇಲೆ ಸ್ಪಷ್ಟವಾಗಿ ನಮೂದಿಸಬೇಕು.
3) ಅರ್ಜಿಯನ್ನು ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ/ ಪ್ರಧಾನ ವ್ಯವಸ್ಥಾಪಕರು **ಶ್ರೀ ಬಸವೇಶ್ವರ ಕೋ-ಆಪರೇಟೀವ್ವ ಬ್ಯಾಂಕ ಲಿಮಿಟೆಡ್ ಬಸವನಬಾಗೇವಾಡಿ** -586203 ತಾ: ಬಸವನ ಬಾಗೇವಾಡಿ ಜಿ: ವಿಜಯಪುರ ಇವರ ಹೆಸರಿಗೆ ಸಲ್ಲಿಸಬೇಕು.
4) ಅರ್ಜಿಯಲ್ಲಿ ಎಲ್ಲಾ ಅಂಕಣಗಳನ್ನು ಪೂರ್ತಿ ಭರ್ತಿ ಮಾಡಿರಬೇಕು.
5) ಅಭ್ಯರ್ಥಿಗೆ ಕನ್ನಡ / ಇಂಗ್ಲೀಷ ಭಾಷಾ ಪರಿಜ್ಞಾನ ಅವಶ್ಯವಿರುತ್ತದೆ.
6) ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಲಿಖಿತ ಪರೀಕ್ಷೆ / ಸಂದರ್ಶನಕ್ಕೆ ಹಾಜರಾಗತಕ್ಕದ್ದು. ಲಿಖಿತ ಪರೀಕ್ಷೆ / ಸಂದರ್ಶನ ದಿನಾಂಕ ಮತ್ತು ವಿವರಗಳನ್ನು ಪ್ರತ್ಯೇಕವಾಗಿ ತಿಳಿಸಲಾಗುವದು.
7) ಅಭ್ಯರ್ಥಿಗಳು ತಮ್ಮ ಎಲ್ಲಾ ಅಂಕಪಟ್ಟಿಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ ಲಗತ್ತಿಸಬೇಕು.

### 5) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:

ಅವಶ್ಯಕ ದಾಖಲಾತಿಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ 07-10-2023 ಮಧ್ಯಾಹ್ನ 2.30 ಗಂಟೆಯ ಒಳಗೆ ಬ್ಯಾಂಕಿನ ಕಛೇರಿ ಬಸವನ ಬಾಗೇವಾಡಿಯಲ್ಲಿ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

### 6) ಇತರೆ ಸೂಚನೆಗಳು:

1) ಕಿರಿಯ ಸಹಾಯಕ ಹುದ್ದೆಗೆ ಈ ಮೇಲೆ ತಿಳಿಸಿದ ಪದವಿಯೊಂದಿಗೆ ಬ್ಯಾಂಕು / ಹಣಕಾಸು ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು.
2) ಪೂರ್ಣ ವಿವರ ಹೊಂದದಿರುವ ಹಾಗೂ ಸಂಬಂಧಪಟ್ಟ ದೃಢೀಕೃತ ದಾಖಲೆಗಳನ್ನು ಲಗತ್ತಿಸದ ಅರ್ಜಿಗಳನ್ನು ಪರಿಗಣಿಸಿಲಾಗುವುದಿಲ್ಲ.
3) ಅಭ್ಯರ್ಥಿಗಳ ಆಯ್ಕೆ / ಅರ್ಜಿ ಸ್ವೀಕರಿಸುವ ಮತ್ತು ನಿರಾಕರಿಸುವ ಹಕ್ಕನ್ನು ನೇಮಕಾತಿ ಸಮಿತಿ ಕಾಯ್ದಿರಿಸಿಕೊಂಡಿದೆ.
4) ನೇಮಕಾತಿಯ ಪ್ರಕ್ರಿಯೆಯನ್ನು ಯಾವುದೇ ಕಾರಣವನ್ನು ನೀಡದೇ ಮುಂದೂಡುವ, ರದ್ದುಪಡಿಸುವ ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.
5) ಯಾವುದೇ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ / ಸಂದರ್ಶನ ಕರೆ ಬಂದಿಲ್ಲವಾದರೆ ಲಿಖಿತ ಪರೀಕ್ಷೆ / ಸಂದರ್ಶನಕ್ಕೆ ಅರ್ಹತೆ ಹೊಂದಿಲ್ಲವೆಂದು ತಿಳಿಯಬೇಕು. ಈ ಕುರಿತು ಪತ್ರವ್ಯವಹಾರ / ದೂರವಾಣಿ ಮೂಲಕ / ಇನ್ನಾವುದೇ ರೀತಿಯ ಸಂಪರ್ಕಕ್ಕೆ ಅವಕಾಶವಿರುವುದಿಲ್ಲ.
6) ಅರ್ಜಿಯನ್ನು ಕಡ್ಡಾಯವಾಗಿ ಸ್ವಹಸ್ತಾಕ್ಷರಗಳಲ್ಲಿ ಭರ್ತಿಮಾಡಿ ಸಲ್ಲಿಸಬೇಕು.
7) ನೇಮಕಾತಿಯ ಪ್ರಕ್ರಿಯೆಯನ್ನು ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳಲಾಗುವದು.
8) ನಿಗದಿತ ಅವಧಿಯೊಳಗೆ ಅರ್ಜಿಗಳು ತಲುಪದಿದ್ದಲ್ಲಿ ಬ್ಯಾಂಕ ಜವಾಬ್ದಾರಿಯಾಗಿರುವದಿಲ್ಲ.
9) ಈಗಾಗಲೇ ಕೆಲಸ ಮಾಡುತ್ತಿರುವ ಅಭ್ಯರ್ಥಿಗಳು ಸಂದರ್ಶನದ ಸಂದರ್ಭದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಸ್ಥೆಯಿಂದ (Employer) ನಿರಪೇಕ್ಷಣಾ ಪತ್ರ ಸಲ್ಲಿಸಬೇಕು.
10) ಅರ್ಜಿಯೊಂದಿಗೆ ಈ ಕೆಳಗಿನ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಪ್ರತಿಗಳನ್ನು ಲಗತ್ತಿಸಬೇಕು:
    1) ವಯಸ್ಸು ದೃಢೀಕರಣ ಕುರಿತು ಎಸ್.ಎಸ್.ಎಲ್.ಸಿ. ಅಂಕಪಟ್ಟಿ / ವರ್ಗಾವಣೆ ಪ್ರಮಾಣ ಪತ್ರ,
    2) ವಿದ್ಯಾರ್ಹತೆ ಕುರಿತು ಪದವಿಯ ಎಲ್ಲಾ ವರ್ಗಗಳ ಅಂಕಪಟ್ಟಿ
    3) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದ ಅಭ್ಯರ್ಥಿಗಳು ಸರಕಾರ ನಿಗದಿಪಡಿಸಿದ ನಮೂನೆಯಲ್ಲಿ ಸಂಬಂಧಿಸಿದವರಿಂದ ದೃಢೀಕರಣ ಪಡೆದ ಪ್ರಮಾಣ ಪತ್ರ.

ದಿನಾಂಕ: 14-09-2023 ಸಹಿ/-

ಸ್ಥಳ: ಬಸವನಬಾಗೇವಾಡಿ

ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ,
ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ
**ಶ್ರೀ ಬಸವೇಶ್ವರ ಕೋ-ಆಪರೇಟೀವ್ವ ಬ್ಯಾಂಕ ಲಿಮಿಟೆಡ್**
**ಬಸವನಬಾಗೇವಾಡಿ**